ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಸೇತುವೆಯು 1966ನೇ ಇಸವಿಯಲ್ಲಿ ಪೂರ್ತಿಗೊಂಡಿತು.

ಆ) ರೂ. 3,47,665 (ಮೂರು ಲಕ್ಷ ನಲವತ್ತೇಳು ಸಾವಿರದ ಆರುನೂರು ಅರವತ್ತೈದು ರೂಪಾಯಿಗಳು).

ಇ) ಸ್ಥಳ ಪರೀಕ್ಷೆಯ ಸಮಯದಲ್ಲಿ ಕೆಲವು ದೋಷಗಳು ಕಂಡುಬಂದುದರಿಂದ, ಇವುಗಳನ್ನು ದುರಸ್ತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

ಈ) ರೂ. 6,000 (ಆರು ಸಾವಿರ ರೂಪಾಯಿಗಳು).

ಉ) ದುರಸ್ತಿ ಕೆಲಸವನ್ನು ಇಲಾಖೆಯ ಮೂಲಕ ಮಾಡಲಾಗಿದೆ.

ಶ್ರೀ ಜಿ. ರಾಜುಗೌಡ (ಹನೂರು).–ಅಧ್ಯಕ್ಷರೇ, ಕೆಲವೇ ವರ್ಷಗಳಲ್ಲಿ ಸೇತುವೆ ದುರ್ಬಲವಾಗಲು ಕಾರಣವೇನು ? ಸ್ಥಳ ಪರೀಕ್ಷೆಯ ಆವಶ್ಯಕತೆ ಏನಿತ್ತು ?

ಶ್ರೀ ಎಚ್. ಡಿ. ದೇವೇಗೌಡ.—ಆ ಸೇತುವೆ ಕೆಲಸ ಈಗ್ಗೆ 20 ವರ್ಷಗಳ ಹಿಂದೆ ಆಗಿರುವುದು. ಇದರ ಬಗ್ಗೆ ಸಂಬಂಧಪಟ್ಟವರು ತನಿಖೆ ಮಾಡಿದಾಗ, ಏನೇನು ದೋಷಗಳು ಕಂಡುಬಂದವು ಅವುಗಳಿಗೆ 6 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ದುರಸ್ತಿ ಮಾಡಲಾಗಿದೆ. ಸೇತುವೆಗೆ ಈಗ ಯಾವ ಅಪಾಯವೂ ಇಲ್ಲ.

ಶ್ರೀ ಜಿ. ರಾಜುಗೌಡ.—ನಿಗದಿತ ಪ್ರಮಾಣದಲ್ಲಿ ಸಿಮೆಂಟ್, ಕಬ್ಬಿಣ ಹಾಕಿದ್ದರೂ ಸೇತುವೆಯಲ್ಲಿ ಲೋಪದೋಷಗಳಿಗೆ ಎಡೆಕೊಟ್ಟಿರುವ ಅಧಿಕಾರಿಗಳ ಬಗ್ಗೆ ತಮ್ಮ ನಿಲುವೇನು ?

ಶ್ರೀ ಎಚ್. ಡಿ. ದೇವೇಗೌಡ.—ಇದು 20 ವರ್ಷಗಳ ಹಿಂದೆ ಆಗಿರುವ ಕೆಲಸವೆಂದು ಆಗಲೇ ಹೇಳಿದೆ. ನನ್ನ ರೆಕಾರ್ಡ್ ಪ್ರಕಾರ ಈಗಾಗಲೇ ಆ ಕಾಲದಲ್ಲಿದ್ದವರೆಲ್ಲಾ ರಿಟೈರ್ ಆಗಿದ್ದಾರೆ. ಒಂದುವೇಳೆ ಈಗ ಅವರು ಇದ್ದರೆ ನಾನು ಆ ಬಗ್ಗೆ ನೋಡುತ್ತೇನೆ.

ಶ್ರೀ ಜಿ. ರಾಜುಗೌಡ.—ನಿಗದಿತ ಪ್ರಮಾಣದಲ್ಲಿ ಸಿಮೆಂಟ್ ಉಪಯೋಗಿಸದೇ ಸೇತುವೆ ದುರಸ್ತಿಗೆ ಒಳಪಡಬೇಕಾಯಿತೇ ?

ಶ್ರೀ ಎಚ್. ಡಿ. ದೇವೇಗೌಡ.—ಈ ಸೇತುವೆ ಕೆಲಸ 1966ರಲ್ಲಿ ಆಗಿವೆ. ಇದು ಈಗ್ಗೆ 20 ವರ್ಷಗಳ ಹಿಂದೆ ಆಗಿರುವುದರಿಂದ ಇದರಲ್ಲಿನ ದೋಷಗಳು ಏನು ಎಂಬ ಬಗ್ಗೆ ವಿಚಾರ ತಿಳಿದು, ಗಮನದಲ್ಲಿಟ್ಟುಕೊಂಡು, ಕೆಲಸ ಮಾಡುತ್ತೇನೆ.

ವಿಷಯ : ತುಂಗ ಅಣೆಕಟ್ಟಿನ ದಡದಿಂದ ಏತ ನೀರಾವರಿ ಯೋಜನೆ.

ಪ್ರ. ಸಂಖ್ಯೆ 21 (41) ಶ್ರೀ ಕೆ. ಎಚ್. ಶ್ರೀನಿವಾಸ (ಶಿವಮೊಗ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ತುಂಗ ಅಣೆಕಟ್ಟಿನ ಮೇಲು ಭಾಗದಲ್ಲಿ (ಪೋರ್ ಷೋರ್‌ದಲ್ಲಿ) ತನಿಖೆ ಮಾಡಿದ ಉಪಯುಕ್ತವಾದ ಏತ ನೀರಾವರಿ ಯೋಜನೆಗಳ ಸಂಖ್ಯೆ ಮತ್ತು ಹೆಸರುಗಳು ಮತ್ತು ಅವುಗಳ ಸಂಕ್ಷಿಪ್ತ ವಿವರಣೆಗಳು ;

ಆ) ತುಂಗಾ ಲೋ-ಲೆವಲ್ ಏತ ನೀರಾವರಿ ಯೋಜನೆಗೆ ಸರ್ಕಾರದ ಮತಿಯಿಂದ ಮಂಜೂರಾತಿ ನೀಡಿದ್ದು ಮತ್ತು ವಾರ್ಷಿಕ ಆಯವ್ಯಯ ಪಟ್ಟಿಯಲ್ಲಿ ಈ ಕೆಲಸ ಸೇರಿದ್ದು ನಿಜವಲ್ಲವೇ ;

ಇ) ನಂತರ ಈ ಕೆಲಸವನ್ನು ಆಯವ್ಯಯ ಪಟ್ಟಿಯಿಂದ ಕೈಬಿಡಲು ಕಾರಣಗಳೇನು ;

ಈ) ತುಂಗ ಲೋ-ಲೆವಲ್ ಏತ ನೀರಾವರಿ ಯೋಜನೆಯನ್ನು ಸರ್ಕಾರ ಶೀಘ್ರದಲ್ಲಿಯೇ ತೆಗೆದು ಕೊಳ್ಳುವುದೇ ?

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಒಂದು ಹೆಸರು : ತುಂಗ ಲೋ-ಲೆವಲ್ ಏತ ನೀರಾವರಿ ಯೋಜನೆ.

ಅಂದಾಜು : 143 ಲಕ್ಷ ರೂ.ಗಳು.

ಆಚ್ಚುಕಟ್ಟು : 4,800 ಎಕರೆ ಅಥವಾ 1948 ಹೆಕ್ಟೇರುಗಳು.

75 ಕ್ಯೂಸೆಕ್ಸ್ ನೀರನ್ನು 92 ಅಡಿ ಎತ್ತರಕ್ಕೆ ಎತ್ತಲು ಯೋಜಿಸಲಾಗಿತ್ತು.

ಆ) ಸರ್ಕಾರ ಈ ಅಂದಾಜಿಗೆ ಮಂಜೂರಾತಿ ನೀಡಿಲ್ಲ. ಈ ಕೆಲಸವನ್ನು 1981-82ನೇ ಸಾಲಿನ ಆಯವ್ಯಯದ ಶೀರ್ಷಿಕೆ 506 ಪಿ.ಒ.ಯಲ್ಲಿ ಸೇರಿಸಲಾಗಿತ್ತು. ಆದರೆ ಮುಂದಿನ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಸೇರಿಲ್ಲ.

ಇ) ಈ ಯೋಜನೆಯಲ್ಲಿ ನೀರಾವರಿಗೆ ಒಳಪಡುವ ಪ್ರದೇಶವು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಿಂದ ತನಿಖೆ ಕಾರ್ಯವು ಮುಂದುವರಿಯುತ್ತಿರುವ ತುಂಗ ಮೇಲ್ದಂಡೆ ಯೋಜನೆಯ ಆಚ್ಚು ಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಒಳಪಡುವುದರಿಂದ ಈ ಯೋಜನೆಯನ್ನು 1982–83ರ ಸಾಲಿನ ಸಣ್ಣ ನೀರಾವರಿ ಆಯವ್ಯಯ ಪಟ್ಟಿಯಲ್ಲಿ ಕೈಬಿಡಲಾಯಿತು.

ಈ) ತುಂಗಾ ಮೇಲ್ದಂಡೆ ಯೋಜನೆ ತನಿಖೆ ಕಾರ್ಯವು ಇನ್ನೂ ನಡೆಯುತ್ತಿದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮತಿ ಪಡೆದ ನಂತರ ತೆಗೆದುಕೊಳ್ಳಬಹುದು.

ಶ್ರೀ ಕೆ. ಎಚ್. ಶ್ರೀನಿವಾಸ್,—ಮಾನ್ಯ ಅಧ್ಯಕ್ಷರೆ, ತುಂಗಾ ಅಣೆಕಟ್ಟಿನ ಮೇಲುಭಾಗದಲ್ಲಿ ತನಿಖೆ ಮಾಡಿದ ಉಪಯುಕ್ತವಾದ ಏತ ನೀರಾವರಿ ಯೋಜನೆಗಳ ಸಂಖ್ಯೆ ಒಂದು ಎಂದು ಹೇಳಿದರು. ಏತ ನೀರಾವರಿ ಯೋಜನೆ ಅಂದಾಜು 143 ಲಕ್ಷ ರೂಪಾಯಿಗಳು, ಆಚ್ಚುಕಟ್ಟು 4,800 ಎಕರೆ ಅಥವಾ 1948 ಹೆಕ್ಟೇರುಗಳು ಎಂದು ಹೇಳುತ್ತೀರಿ. ಈ ಒಂದು ಮಾಹಿತಿ ಸಮರ್ಪಕ ಅಲ್ಲ. 1,000 ಟಿ.ಎಂ.ಸಿ.ಗೆ ಮಾಸ್ಟರ್ ಪ್ಲಾನ್ ಆಫ್ ಕೃಷ್ಣಾ ಬೇಸಿನ್ ಪ್ರಕಾರ ತಯಾರಿಸಲಾಗಿದ್ದು, ಇದರಲ್ಲಿ ಎರಡು ಹಂತ ಇದೆ. The first stage involves only putting of a crest gate 13.75 feet to the existing Tunga Anecut and lifting the water from fore–shore only for irrigating a net area of 54,000 acres. ಇದರ ಬಗ್ಗೆ ತಾವು ಯಾವುದೇ ಮಾಹಿತಿ ಕೊಟ್ಟಿಲ್ಲ. ತಾವು ಕೊಟ್ಟಿರತಕ್ಕ ಮಾಹಿತಿ ಅಸಮರ್ಪಕವಾಗಿರುವುದರಿಂದ, ಅಧ್ಯಕ್ಷರು ಈ ಪ್ರಶ್ನೆಯನ್ನು ತಡೆಹಿಡಿಯಬೇಕು. ಸಚಿವರು ತಜ್ಞರು ಇದ್ದಾರೆ, ಸರಿಯಾದ, ವಿವರವನ್ನು ಕೊಡುತ್ತಾರೆಂದು ನಿರೀಕ್ಷೆ ಮಾಡಿದ್ದೆ. ಆದರೆ ಅವರು ಮೌನ ವಹಿಸಿರುವುದು ಆಶ್ಚರ್ಯವಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರವನ್ನು ಗಮನದಲ್ಲಿಟ್ಟು ಕೊಂಡು ಉತ್ತರ ಹೇಳುವುದಕ್ಕೆ ಇಚ್ಚಿಪಡುತ್ತೇನೆ. ಅಪ್ಪರ್ ಕೃಷ್ಣ ಮತ್ತು ಅಪ್ಪರ್ ಭದ್ರ ಬಗ್ಗೆ ತಾವೂ ಕೂಡ ಸಾಕಷ್ಟು ತಿಳಿದುಕೊಂಡಿದ್ದೀರಿ. ಮತ್ತಷ್ಟು ನಾನು ಅದನ್ನು ವಿಚಾರ ಮಾಡುತ್ತೇನೆ. 1,000 ಟಿ.ಎಂ.ಸಿ. ಅಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ನಾನು ಹೇಳಿದ್ದೇನೆ. ಅದು ಸ್ಕೀಂ (ಬಿ)ನಲ್ಲಿ ಬಂದಿರತಕ್ಕಂಥಾದ್ದು. ಆದರೆ ಅಲ್ಲಿ 1,000 ಟಿ.ಎಂ.ಸಿ. ಅಷ್ಟು ನೀರು ಇಲ್ಲ. ಈಗ ಅಲ್ಲಿ ಇರತಕ್ಕಂಥಾದ್ದು 700 ಟಿ.ಎಂ.ಸಿ. ಅಷ್ಟು ನೀರು ಮಾತ್ರ.

Sri K. H. Srinivas.—There is what is known as Krishna Master Plan for utilisation of total 1,000 TMC ft.

Sri H. D. Deve Gowda.—Both master plan includes utilisation of 734 TMC ft. plus surplus water which accrue after 2,000 AD. ಅಷ್ಟಕ್ಕೆ ಮಾತ್ರ ಮಾಸ್ಟರ್ ಪ್ಲಾನ್ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್ ರವರು ಏನು ಹೇಳುತ್ತಿದ್ದಾರೆಂದರೆ ಅಪ್ಪರ್ ತುಂಗಾವನ್ನು ಪ್ಲೋ ಇರಿಗೇಷನ್ ಮಾಡುವುದಕ್ಕೆ ಸಾಧ್ಯತೆ ಇತ್ತು. ಅದನ್ನು ಲಿಫ್ಟ್ ಮಾಡಿ ಒಂದು ಕ್ರಿಸ್ಟ್ ಗೇಟ್ ಹಾಕಿದ್ದರೆ ಅದರಿಂದ 54.00 ಎಕರೆ ನೀರಾವರಿ ಯಾಗುತ್ತಿತ್ತು, ಇದನ್ನು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಮಾಡಬಹುದಾಗಿತ್ತು ಎಂದು ತಾವು ಲಿಫ್ಟ್ ಇರಿಗೇಷನ್ ಸ್ಕೀಂ ಬಗ್ಗೆ ಪ್ರಶ್ನೆ ಕೇಳಿರುವುದರಿಂದ ಅದಕ್ಕೆ ಮಾತ್ರ ಉತ್ತರ ಕೊಟ್ಟಿದ್ದೇನೆ. ಅವರು ಇದಲ್ಲದೆ ಇನ್ನು ಬೇರೆ ಯಾವುದೋ ಕೆನಾಲದ್ದಾಗಲಿ, ಇರಿಗೇಷನ್‌ದ್ದಾಗಲಿ ಸ್ಕೀಂ ಮಾಡಿದ್ದಾರೆ ಅದನ್ನು ಮುಚ್ಚಿಟ್ಟಿದ್ದಾರೆನ್ನುವ ಅರ್ಥದಲ್ಲಿ ಹೇಳಿದ್ದರೆ, ಅಧಿಕಾರಿಗಳು ಅದನ್ನು ಮುಚ್ಚಿಟ್ಟಿದ್ದಾರೆ ಎಂದು ತಿಳಿದುಕೊಂಡಿದ್ದರೆ ಅದನ್ನು ತರಿಸುತ್ತೇನೆ. ಆ ರೀತಿ ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಮಾತ್ರ ಈ ಪ್ರಶ್ನೆ ಸಂಬಂಧಪಟ್ಟಿದ್ದು. 54,000 acres, what you have mentioned just now is either by flow or by lift irrigation ಅದರ ಬಗ್ಗೆ ವಿವರಣೆ ಕೊಡಬೇಕು ಎನ್ನುವುದಾದರೆ ಹೇಳುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾನು ಏನು ಪ್ರಶ್ನೆಯನ್ನು ಈ ಸಂಬಂಧವಾಗಿ ಕೇಳಿದ್ದೇನೆ ಅದನ್ನು ಕಾನೂನಿನ ಚೌಕಟ್ಟಿನ ಒಳಗೇ ಕೇಳಿದ್ದೇನೆಯೇ ವಿನಹ ಕಾನೂನಿನ ಚೌಕಟ್ಟಿನ ಹೊರಗಡೆ ಕೈಹಾಕಿಲ್ಲ. ನಾನು ಹೇಳಿರತಕ್ಕಂಥಾದ್ದು ಏನೆಂದರೆ ತುಂಗಾ ಲಿಫ್ಟ್ ಇರಿಗೇಷನ್ ಸ್ಕೀಂ ಏನು ಇದೆ, which is conceived to cover in two stages for a total utilisation of 10 TMC ft. as per allocation proposed in the Master Plan for 1,000 TMC ft. ಅದಕ್ಕೆ ಒಂದು ಕ್ರಿಸ್ಟ್ ಗೇಟನ್ನು ಜೋಡಿಸಿ ಈಗ ಇರತಕ್ಕಂಥ ಕೆನಾಲ್ ಅನ್ನು ಎಕ್ಸ್‌ಪಂಡ್ ಮಾಡಿ

ದ್ದರೆ 54 ಸಾವಿರ ಎಕರೆ ನೀರಾವರಿ ಕೊಡತಕ್ಕಂಥ ಲಿಫ್ಟ್ ಇರಿಗೇಷನ್ ಆಗುತ್ತಿತ್ತು. ಈ ನೀರಾವರಿ ವಿಚಾರದಲ್ಲಿ ತಮ್ಮ ಪಾಂಡಿತ್ಯವನ್ನು ನಾನು ವಿಚಾರ ಮಾಡುವುದಿಲ್ಲ. ಇದರ ಬಗ್ಗೆ ತಮಗೆ ವಿವರಣೆ ಕಳುಹಿಸಿಕೊಡುತ್ತೇನೆ. ವಿಚಾರ ಮಾಡಿ.

ಶ್ರೀ ಎಚ್. ಡಿ. ದೇವೇಗೌಡ.—ಕಳುಹಿಸಿಕೊಡಿ.

ಅಧ್ಯಕ್ಷರು.—ನಿಮಗೆ ಇದರ ಬಗ್ಗೆ ಸಮಾಧಾನ ಇಲ್ಲದೇ ಹೋದರೆ ಇದನ್ನು ಅರ್ಧ ಗಂಟೆ ಕಾಲದ ಚರ್ಚೆಗೆ ಹಾಕೋಣ. ಕಳುಹಿಸಿಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರಿಗೆ ಇದರ ಬಗ್ಗೆ ಆಸಕ್ತಿ ಇದೆ ಎನ್ನುವುದೂ ನನಗೂ ಗೊತ್ತಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಪ್ರಶ್ನೆ ಅರ್ಧ ಗಂಟೆ ಕಾಲದ ಚರ್ಚೆಗೆ ಯೋಗ್ಯವಾದುದಾಗಿದೆ. ಆದುದರಿಂದ ನಾನು ಬರೆದು ಕಳುಹಿಸಿ ಕೊಡುತ್ತೇನೆ.

ಅಧ್ಯಕ್ಷರು.—ನೀವು ಕಳುಹಿಸಿಕೊಡಿ.

ವಿಷಯ : ಗುರುಮಿಟ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು

ಪ್ರ. ಸಂಖ್ಯೆ 22 (48) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಗುರುಮಿಟ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ 1984-85 ರ ಸಾಲಿನ ನಿಯಮಿತ ಆಯವ್ಯಯ ಡಿ.ಪಿ.ಎ.ಪಿ, ಮತ್ತಿತರ ಯೋಜನೆಗಳಲ್ಲಿ ತೆಗೆದುಕೊಂಡ ನೀರಾವರಿ ಕೆಲಸಗಳ ಸಂಖ್ಯೆ. (ಅಂದಾಜು ನಕ್ಷೆಗಳ ವಿವರ, ಈಗ ಯಾವ ಹಂತದಲ್ಲಿ ಉಳಿದಿವೆಯೆಂಬುದನ್ನು ಕೊಡಬೇಕು) ;

ಆ) ಪ್ರಸಕ್ತ ವರ್ಷದಲ್ಲಿ ಈ ಮೇಲೆ ಹೇಳಿದ ಈ ಕಾಮಗಾರಿಗಳಿಗೆ ಖರ್ಚು ಮಾಡಿದ ಹಣದ ಮೊತ್ತ ?

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) 16 (ವಿವರವಾದ ಪಟ್ಟಿಯನ್ನು ಲಗತ್ತಿಸಿದೆ).

ಆ) 1985-86ರ ಸಾಲಿನಲ್ಲಿ 2.12 ಲಕ್ಷ ರೂಪಾಯಿಗಳು (ವಿವರಗಳು ಪಟ್ಟಿಯಲ್ಲಿವೆ)